**ಕರ್ನಾಟಕ ಸರ್ಕಾರ** **ಸಿ ಆರ್ ಪಿ ಸಿ 67**

**ಹೇಳಿಕೆ ಹಾಳೆ**

**(ಆರ್.ಪಿ.ಸಂಖ್ಯೆ 57)**

**ನಮೂನೆ ಸಂಖ್ಯೆ 4**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಸಿಂಧನೂರು.**

**ಸಿ.ಸಿ. ಸಂಖ್ಯೆಃ 2590/2023 CW-2 PW- 1**

| | |
|---|---|
| **ಹೆಸರು** | **ಮಾರೇಶ** |
| **ತಂದೆಯ ಹೆಸರು** | **ಸದಾಪ್ಪ** |
| **ವಯಸ್ಸು** | **38 ವರ್ಷ** |
| **ಉದ್ಯೋಗ** | **ಕೂಲಿ ಕೆಲಸ** |
| **ವಾಸ ಸ್ಥಳ** | **ಧಡೇಸುಗೂರು** |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ 13-01-2026**

**ಮುಖ್ಯ ವಿಚಾರಣೆಃ ಸ ಸ ಅ ಅವರಿಂದ**

ಚಾ.ಸಾ. 3 ರ ಪರಿಚಯ ಇಲ್ಲ. ಪ್ರಕರಣದ ಕುರಿತು ಯಾವುದೇ ಮಾಹಿತಿ ಇಲ್ಲ. ಸಾಕ್ಷಿ ಶೋಧನಾ ಸಮುಚ್ಛಿತ ವರದಿ ಮತ್ತು ದಾಳಿ ಪಂಚನಾಮೆಗಳಲ್ಲಿನ ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿ.ಪಿ. 1(ಎ) ಮತ್ತು 2(ಎ) ಎಂದು ಗುರುತಿಸಲಾಯಿತು. ಮುಂದುವರೆದು ಸಾಕ್ಷಿ ಸುಮಾರು 2 ವರ್ಷಗಳ ಹಿಂದೆ ತಾನು ಸಿಂಧನೂರು ಅಬಕಾರಿ ಪೋಲೀಸ್ ಠಾಣೆಯ ಮುಂದೆ ಹಾದು ಹೋಗುತ್ತಿರುವಾಗ ಪೋಲೀಸರು ನಿ.ಪಿ. 1(ಎ) ಮತ್ತು 2(ಎ) ರಂತೆ ಸಹಿಗಳನ್ನು ಪಡೆದುಕೊಂಡಿದ್ದಾರೆಂದು ನುಡಿಯುತ್ತಾರೆ. ಇಷ್ಟರ ಹೊರತಾಗಿ ನನಗೆ ಏನೂ ಗೊತ್ತಿಲ್ಲ. ಸಾಕ್ಷಿ ಲಿಸ್ಟ್ ಆಫ್ ಆರ್ಟಿಕಲ್ಸ್‌ನಲ್ಲಿನ ಸಹಿ ನೋಡಿ ಗುರುತಿಸಿದ್ದು, ಅದನ್ನು ನಿ.ಪಿ. 3 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 3(ಎ) ಎಂದು ಗುರುತಿಸಲಾಯಿತು. ಮಾದರಿ ಮುದ್ರೆ ನಮೂನೆಯನ್ನು ನಿ.ಪಿ. 4 ಎಂದು, ಅದರಲ್ಲಿನ ಸಾಕ್ಷಿ ಸಹಿಯನ್ನು ನಿ.ಪಿ. 4(ಎ) ಎಂದು ಗುರುತಿಸಲಾಯಿತು. ಮುದ್ದೆಮಾಲಿನ ಮೇಲೆ ನಾನು ಸಹಿ ಮಾಡಿದ ಚೀಟಿಯನ್ನು ಅಂಟಿಸಿರುತ್ತಾರೆ, ಯಾವ ಕಾರಣಕ್ಕೆಂದು ಗೊತ್ತಿಲ್ಲ. ನಿ.ಪಿ. 2 ರ ಕಾಲಕ್ಕೆ ತೆಗೆದರೆನ್ನಲಾದ ಒಂದು ಭಾವಚಿತ್ರ ನೋಡಿ ಸಾಕ್ಷಿ ಗುರುತಿಸಿದ್ದು, ಅದನ್ನು ನಿ.ಪಿ. 5 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸ ಸ ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿಲಾಯಿತು.)**

**ಪಾಟೀ ಸವಾಲು ಃ ಸಸಅ ಅವರಿಂದ**

ದಿ: 04-08-2023 ರಂದು ಬೆ. 8.30 ರ ಸುಮಾರಿಗೆ ಅಲಬನೂರು ಕ್ರಾಸ್‌ನಲ್ಲಿ ನಾನು ಮತ್ತು ಚಾ.ಸಾ. 3 ನಿಂತಾಗ ಸಿಂಧನೂರಿನ ಅಬಕಾರಿ ಅಧಿಕಾರಿಗಳು ನಮ್ಮ ಪರಿಚಯ ಮಾಡಿಕೊಂಡು ಅಬಕಾರಿ ಅಕ್ರಮದ ಕುರಿತು ಮಾಹಿತಿ ಬಂದಿದ್ದು, ಗುನ್ಹೆ ಸಾಬೀತಾದರೆ ಪಂಚರಾಗಿ ಸಹಕರಿಸುವಂತೆ ನಮಗೆ ಕೇಳಿಕೊಂಡರು ಎಂದರೆ ಸರಿಯಲ್ಲ. ಆಗ ನಾನು ಒಪ್ಪಿ ಚಾ.ಸಾ. 1 ರವರ ಜೊತೆ ಅಲಬನೂರು ಕ್ರಾಸ್‌ನಲ್ಲಿರುವ ಶ್ರೀ ಬೂದಿವಾಳ ಬಸವೇಶ್ವರ ಎಂಟರ್ ಪ್ರೈಸ್ಸ್ ಅಂಗಡಿಯ ಹತ್ತಿರ ರಸ್ತೆಗಾವಲು ಕಾರ್ಯ ಮಾಡುತ್ತಿರುವಾಗ ಬೆ. 8.25 ರ ಸುಮಾರಿಗೆ ಸಿಂಧನೂರು ತಾಲೂಕಿನ ಬೆಳಗುರ್ಕಿ ಗ್ರಾಮದ ಕಡೆಯಿಂದ ಟಾಟಾ ಮ್ಯಾಜಿಕ್ ವಾಹನ ಬರುತ್ತಿರುವುದನ್ನು ಗಮನಿಸಿ ಚಾ.ಸಾ. 1 ರವರು ಸಿಬ್ಬಂದಿ ಸಹಾಯದಿಂದ ವಾಹನವನ್ನು ನಿಲ್ಲಿಸಿದರು ಎಂದರೆ ಸರಿಯಲ್ಲ. ಸದರಿ ವಾಹನ ಚಾಲಕ ತನ್ನ ಹೆಸರು ರಹೀಂಸಾಬ ತಂ. ಲಾಲ್‌ಸಾಬ್ ಎಂದು ತಿಳಿಸಿದ ಎಂದರೆ ಸರಿಯಲ್ಲ. ನಂತರ ಆತನ ಬಳಿ ಇರುವ ವಾಹನವನ್ನು ಶೋಧನೆ ಮಾಡಲು ವಾರೆಂಟ್ ಇಲ್ಲದ ಕಾರಣ ನಿ.ಪಿ. 1 ರಂತೆ ವರದಿ ತಯಾರಿಸಿದರು ಎಂದರೆ ಸರಿಯಲ್ಲ. ಸದರಿ ವಾಹನವನ್ನು ನಮ್ಮ ಸಮಕ್ಷಮ ಪರಿಶೀಲಿಸಲಾಗಿ ಅದರಲ್ಲಿ ಓ.ಸಿ. ವಿಸ್ಕಿಯ 18 ರಟ್ಟಿನ ಪೆಟ್ಟಿಗೆಗಳು ಇದ್ದವು ಎಂದರೆ ಸರಿಯಲ್ಲ. ಅವುಗಳಲ್ಲಿ 90 ಎಂ.ಎಲ್. ಅಳತೆಯಷ್ಟು ಈ ಮೇಲೆ ಹೇಳಿದ ವಿಸ್ಕಿಯ 1728 ಟೆಟ್ರಾಪಾಕೇಟ್‌ಗಳಿದ್ದವು ಎಂದರೆ ಸರಿಯಲ್ಲ. ಆತನ ವಾಹನವನ್ನು ಪರಿಶೀಲಿಸಲಾಗಿ ಅದು ಟಾಟಾ ಮ್ಯಾಜಿಕ್ ವಾಹನ ನೊಂದಣಿ ಸಂ. ಕೆ.ಎ. 33 ಎಂ 3275 ಆಗಿತ್ತು ಎಂದರೆ ಸರಿಯಲ್ಲ. ಆತನ ಬಳಿ ಸದರಿ ಮು.ಮಾ. ಸಾಗಾಣಿಕೆ ಮಾಡಲು ಅಧೀಕೃತ ಪರವಾನಿಗೆ ಇಲ್ಲ ಎಂದು ತಿಳಿಸಿದ ನಂತರ ನಮ್ಮ ಸಮಕ್ಷಮ ಚಾ.ಸಾ. 1 ರವರು ಮು.ಮಾ. ವನ್ನು ಜಪ್ತುಪಡಿಸಿಕೊಂಡು ಅದರಿಂದ ತಲಾ ಒಂದು ರಟ್ಟಿನ ಪೆಟ್ಟಿಗೆಯಿಂದ 90 ಎಂ.ಎಲ್. ಓ.ಸಿ. ವಿಸ್ಕಿಯ 10 ಟೆಟ್ರಾಪಾಕೆಟ್‌ಗಳಂತೆ ಒಟ್ಟು 180 ಟೆಟ್ರಾಪಾಕೇಟ್‌ಗಳನ್ನು ರಾಸಾಯನಿಕ ಪರೀಕ್ಷೆಗೆ ನಿಯಮಾನುಸಾರ ಮಾದರಿ ತೆಗೆದುಕೊಂಡು ಪಂಚನಾಮೆಯನ್ನು ಬೆ. 8.40 ರಿಂದ 10.00 ರವರೆಗೆ ಜರುಗಿಸಿದರು ಎಂದರೆ ಸರಿಯಲ್ಲ. ನಿ.ಪಿ. 2 ನ್ನು ಓದಿ ತಿಳಿದುಕೊಂಡ ನಂತರ ನಿ.ಪಿ. 2(ಎ) ರಂತೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ. 3(ಎ) ಮತ್ತು 4(ಎ)ರಂತೆ ಯಾವ ಕಾರಣಕ್ಕೆ ಸಹಿ ಮಾಡಿದ್ದೇನೆ ಎಂದು ಗೊತ್ತಿಲ್ಲ. ನಿ.ಪಿ. 1 ರಿಂದ 4, ಆರೋಪಿ ಮತ್ತು ಮು.ಮಾ. ಕುರಿತು ಮಾಹಿತಿ ಇದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು : ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.</u>**

**<u>ಮರು ವಿಚಾರಣೆ ಇಲ್ಲ.</u>**

**(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ.)**

**ಓ. ಹೇ. ಕೇ. ಸರಿ ಇದೆ,**

**1 ನೇ ಹೆಚ್ಚುವರಿ ಸಿಜೆ & ಜೆಎಂಎಫ್‌ಸಿ, ನ್ಯಾಯಾಲಯ,ಸಿಂಧನೂರು.**

**ಕರ್ನಾಟಕ ಸರ್ಕಾರ** **ಸಿ ಆರ್ ಪಿ ಸಿ 67**

**ಹೇಳಿಕೆ ಹಾಳೆ**

**(ಆರ್.ಪಿ.ಸಂಖ್ಯೆ 57)**

**ನಮೂನೆ ಸಂಖ್ಯೆ 4**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಸಿಂಧನೂರು.**

**ಸಿ.ಸಿ. ಸಂಖ್ಯೆಃ 2590/2023 CW-3 PW- 2**

| | |
|---|---|
| **ಹೆಸರು** | **ವೀರೇಶ** |
| **ತಂದೆಯ ಹೆಸರು** | **ಮೌಲಪ್ಪ** |
| **ವಯಸ್ಸು** | **25 ವರ್ಷ** |
| **ಉದ್ಯೋಗ** | **ಕೂಲಿ ಕೆಲಸ** |
| **ವಾಸ ಸ್ಥಳ** | **ಧಡೇಸುಗೂರು** |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ 13-01-2026**

**ಮುಖ್ಯ ವಿಚಾರಣೆಃ ಸ ಸ ಅ ಅವರಿಂದ**

ಚಾ.ಸಾ. 2 ರ ಪರಿಚಯ ಇಲ್ಲ. ಪ್ರಕರಣದ ಕುರಿತು ಯಾವುದೇ ಮಾಹಿತಿ ಇಲ್ಲ. ಸಾಕ್ಷಿ ಶೋಧನಾ ಸಮುಚ್ಛಿತ ವರದಿ ಮತ್ತು ದಾಳಿ ಪಂಚನಾಮೆಗಳಲ್ಲಿನ ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿ.ಪಿ. 1(ಬಿ) ಮತ್ತು 2(ಬಿ) ಎಂದು ಗುರುತಿಸಲಾಯಿತು. ಮುಂದುವರೆದು ಸಾಕ್ಷಿ ಸುಮಾರು 2 ವರ್ಷಗಳ ಹಿಂದೆ ತಾನು ಸಿಂಧನೂರು ಅಬಕಾರಿ ಪೋಲೀಸ್ ಠಾಣೆಯ ಮುಂದೆ ಹಾದು ಹೋಗುತ್ತಿರುವಾಗ ಪೋಲೀಸರು ನಿ.ಪಿ. 1(ಬಿ) ಮತ್ತು 2(ಬಿ) ರಂತೆ ಸಹಿಗಳನ್ನು ಪಡೆದುಕೊಂಡಿದ್ದಾರೆಂದು ನುಡಿಯುತ್ತಾರೆ. ಇಷ್ಟರ ಹೊರತಾಗಿ ನನಗೆ ಏನೂ ಗೊತ್ತಿಲ್ಲ. ಸಾಕ್ಷಿ ನಿ.ಪಿ. 3 ನ್ನು ನೋಡಿ ಗುರುತಿಸಿದ್ದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿ.ಪಿ. 3(ಬಿ) ಎಂದು ಗುರುತಿಸಲಾಯಿತು. ನಿ.ಪಿ. 4 ರಲ್ಲಿನ ಸಾಕ್ಷಿ ಸಹಿಯನ್ನು ನಿ.ಪಿ. 4(ಬಿ) ಎಂದು ಗುರುತಿಸಲಾಯಿತು. ಮುದ್ದೆಮಾಲಿನ ಮೇಲೆ ನಾನು ಸಹಿ ಮಾಡಿದ ಚೀಟಿಯನ್ನು ಅಂಟಿಸಿರುತ್ತಾರೆ, ಯಾವ ಕಾರಣಕ್ಕೆಂದು ಗೊತ್ತಿಲ್ಲ. ನಿ.ಪಿ. 5 ನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಸ ಸ ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿಲಾಯಿತು.)**

**ಪಾಟೀ ಸವಾಲು ಃ ಸಸಅ ಅವರಿಂದ**

ದಿ: 04-08-2023 ರಂದು ಬೆ. 8.30 ರ ಸುಮಾರಿಗೆ ಅಲಬನೂರು ಕ್ರಾಸ್‌ನಲ್ಲಿ ನಾನು ಮತ್ತು ಚಾ.ಸಾ. 2 ನಿಂತಾಗ ಸಿಂಧನೂರಿನ ಅಬಕಾರಿ ಅಧಿಕಾರಿಗಳು ನಮ್ಮ ಪರಿಚಯ ಮಾಡಿಕೊಂಡು ಅಬಕಾರಿ

ಅಕ್ರಮದ ಕುರಿತು ಮಾಹಿತಿ ಬಂದಿದ್ದು, ಗುನ್ಹೆ ಸಾಬೀತಾದರೆ ಪಂಚರಾಗಿ ಸಹಕರಿಸುವಂತೆ ನಮಗೆ ಕೇಳಿಕೊಂಡರು ಎಂದರೆ ಸರಿಯಲ್ಲ. ಆಗ ನಾನು ಒಪ್ಪಿ ಚಾ.ಸಾ. 1 ರವರ ಜೊತೆ ಅಲಬನೂರು ಕ್ರಾಸ್‌ನಲ್ಲಿರುವ ಶ್ರೀ ಬೂದಿವಾಳ ಬಸವೇಶ್ವರ ಎಂಟರ್ ಪ್ರಸೈಸ್ ಅಂಗಡಿಯ ಹತ್ತಿರ ರಸ್ತೆಗಾವಲು ಕಾರ್ಯ ಮಾಡುತ್ತಿರುವಾಗ ಬೆ. 8.25 ರ ಸುಮಾರಿಗೆ ಸಿಂಧನೂರು ತಾಲೂಕಿನ ಬೆಳಗುರ್ಕಿ ಗ್ರಾಮದ ಕಡೆಯಿಂದ ಟಾಟಾ ಮ್ಯಾಜಿಕ್ ವಾಹನ ಬರುತ್ತಿರುವುದನ್ನು ಗಮನಿಸಿ ಚಾ.ಸಾ. 1 ರವರು ಸಿಬ್ಬಂದಿ ಸಹಾಯದಿಂದ ವಾಹನವನ್ನು ನಿಲ್ಲಿಸಿದರು ಎಂದರೆ ಸರಿಯಲ್ಲ. ಸದರಿ ವಾಹನ ಚಾಲಕ ತನ್ನ ಹೆಸರು ರಹೀಂಸಾಬ ತಂ. ಲಾಲ್‌ಸಾಬ್ ಎಂದು ತಿಳಿಸಿದ ಎಂದರೆ ಸರಿಯಲ್ಲ. ನಂತರ ಆತನ ಬಳಿ ಇರುವ ವಾಹನವನ್ನು ಶೋಧನೆ ಮಾಡಲು ವಾರೆಂಟ್ ಇಲ್ಲದ ಕಾರಣ ನಿ.ಪಿ. 1 ರಂತೆ ವರದಿ ತಯಾರಿಸಿದರು ಎಂದರೆ ಸರಿಯಲ್ಲ. ಸದರಿ ವಾಹನವನ್ನು ನಮ್ಮ ಸಮಕ್ಷಮ ಪರಿಶೀಲಿಸಲಾಗಿ ಅದರಲ್ಲಿ ಓ.ಸಿ. ವಿಸ್ಕಿಯ 18 ರಟ್ಟಿನ ಪೆಟ್ಟಿಗೆಗಳು ಇದ್ದವು ಎಂದರೆ ಸರಿಯಲ್ಲ. ಅವುಗಳಲ್ಲಿ 90 ಎಂ.ಎಲ್. ಅಳತೆಯಷ್ಟು ಈ ಮೇಲೆ ಹೇಳಿದ ವಿಸ್ಕಿಯ 1728 ಟೆಟ್ರಾಪಾಕೇಟ್‌ಗಳಿದ್ದವು ಎಂದರೆ ಸರಿಯಲ್ಲ. ಆತನ ವಾಹನವನ್ನು ಪರಿಶೀಲಿಸಲಾಗಿ ಅದು ಟಾಟಾ ಮ್ಯಾಜಿಕ್ ವಾಹನ ನೊಂದಣಿ ಸಂ. ಕೆ.ಎ. 33 ಎಂ 3275 ಆಗಿತ್ತು ಎಂದರೆ ಸರಿಯಲ್ಲ. ಆತನ ಬಳಿ ಸದರಿ ಮು.ಮಾ. ಸಾಗಾಣಿಕೆ ಮಾಡಲು ಅಧೀಕೃತ ಪರವಾನಿಗೆ ಇಲ್ಲ ಎಂದು ತಿಳಿಸಿದ ನಂತರ ನಮ್ಮ ಸಮಕ್ಷಮ ಚಾ.ಸಾ. 1 ರವರು ಮು.ಮಾ. ವನ್ನು ಜಪ್ತುಪಡಿಸಿಕೊಂಡು ಅದರಿಂದ ತಲಾ ಒಂದು ರಟ್ಟಿನ ಪೆಟ್ಟಿಗೆಯಿಂದ 90 ಎಂ.ಎಲ್. ಓ.ಸಿ. ವಿಸ್ಕಿಯ 10 ಟೆಟ್ರಾಪಾಕೆಟ್‌ಗಳಂತೆ ಒಟ್ಟು 180 ಟೆಟ್ರಾಪಾಕೇಟ್‌ಗಳನ್ನು ರಾಸಾಯನಿಕ ಪರೀಕ್ಷೆಗೆ ನಿಯಮಾನುಸಾರ ಮಾದರಿ ತೆಗೆದುಕೊಂಡು ಪಂಚನಾಮೆಯನ್ನು ಬೆ. 8.40 ರಿಂದ 10.00 ರವರೆಗೆ ಜರುಗಿಸಿದರು ಎಂದರೆ ಸರಿಯಲ್ಲ. ನಿ.ಪಿ. 2 ನ್ನು ಓದಿ ತಿಳಿದುಕೊಂಡ ನಂತರ ನಿ.ಪಿ. 2(ಬಿ) ರಂತೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ. 3(ಬಿ) ಮತ್ತು 4(ಬಿ)ರಂತೆ ಯಾವ ಕಾರಣಕ್ಕೆ ಸಹಿ ಮಾಡಿದ್ದೇನೆ ಎಂದು ಗೊತ್ತಿಲ್ಲ. ನಿ.ಪಿ. 1 ರಿಂದ 4, ಆರೋಪಿ ಮತ್ತು ಮು.ಮಾ. ಕುರಿತು ಮಾಹಿತಿ ಇದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.**

**ಮರು ವಿಚಾರಣೆ ಇಲ್ಲ.**

**(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ.)**

**ಓ. ಹೇ. ಕೇ. ಸರಿ ಇದೆ,**

**1 ನೇ ಹೆಚ್ಚುವರಿ ಸಿಜೆ & ಜೆಎಂಎಫ್‌ಸಿ, ನ್ಯಾಯಾಲಯ,ಸಿಂಧನೂರು.**